**<u>ಸಾಕ್ಷಿಯನ್ನು ದಿನಾಂಕ 16-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಜಿ.ವೈ ವಕೀಲರಿಂದಃ</u>**

21. ನಿ.ಪಿ.–6 ರಂತೆ ನಾನು ಹಾಜರುಪಡಿಸಿರುವ ಮ್ಯೂಟೇಷನ್ ದಾಖಲೆಯಲ್ಲಿ ನಿಡಿ–1 ರಂತೆ ನಮ್ಮ ಒಟ್ಟು ಕುಟುಂಬದಲ್ಲಿ ಆಗಿರುವ ಪಾಲು ವಿಭಾಗದ ಪ್ರಕಾರ ಕಂದಾಯ ದಾಖಲೆಗಳ ಬದಲಾವಣೆಗೆ ಆದೇಶವಾಗಿದೆ ಎಂದರೆ ಸರಿ. ಸಾಕ್ಷಿ ಸ್ವ ಇಚ್ಚೆಯಿಂದ ಮ್ಯೂಟೇಷನ್ ಆದೇಶವನ್ನು ನನ್ನ ದೊಡ್ಡಮ್ಮ ನಾಗಮ್ಮ ರವರೇ ಮಾಡಿಸಿದ್ದಾರೆ ಎನ್ನುತ್ತಾರೆ. ಪಾಲು ವಿಭಾಗದಂತೆ ನನ್ನ ಹೆಸರಿಗೆ ಬಂದ ಆಸ್ತಿಗಳನ್ನು ನಾನು ಈಗ ಅನುಭವಿಸುತ್ತಿದ್ದೇನೆ ಎಂದರೆ ಸರಿ. ಅದರಂತೆ ನಮ್ಮ ಕುಟುಂಬದ ಇತರರು ಸಹ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ. ಪಾಲು ವಿಭಾಗದಂತೆ ಬದಲಾವಣೆಯಾಗಿರುವ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

22. ದಾವಾ ಐಟಂ ನಂಬರ್ 2 ಸ್ವತ್ತು ಈಗ 8 ನೇ ಪ್ರತಿವಾದಿಯ ಹೆಸರಿಗೆ ಇದೆ. ಸದರಿ ವಿಷಯವನ್ನು ವಾದ ಪತ್ರದಲ್ಲಿ ಬರೆಸಿದೇನೋ ಇಲ್ಲವೊ ನನಗೆ ಗೊತ್ತಿಲ್ಲ. ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದಾವಾ ಐಟಂ ನಂಬರ್ 2 ರ ಸ್ವತ್ತು ಈಗ ಅಸ್ತಿತ್ವದಲ್ಲಿಲ್ಲ ಮತ್ತು ಅದರ ದಾಖಲೆಯೂ 8 ನೇ ಪ್ರತಿವಾದಿಯ ಹೆಸರಿಗೆ ಇಲ್ಲ ಹಾಗಾಗಿ ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ದಾಖಲೆ ಕೊಡಬೇಕೆಂದು ಗೊತ್ತಾಗಲಿಲ್ಲ ಎನ್ನುತ್ತಾರೆ. ಅಸ್ತಿತ್ವದಲ್ಲಿ ಇರದ ಆಸ್ತಿಯನ್ನು ದಾವಾ

ಐಟಂ ನಂಬರ್ 2 ಎಂದು ತೋರಿಸಿ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

23. ನನ್ನ ತಾಯಿ ಈಗ ಬದುಕಿಲ್ಲ. ಆಕೆ 2018 ರಲ್ಲಿ ತೀರಿಕೊಂಡಿದ್ದಾರೆ. ನನ್ನ ತಾಯಿ ತೀರಿಕೊಂಡ ನಂತರ ನನ್ನ ಮತ್ತು ಅವರ ಜಂಟಿ ಹೆಸರಿಗೆ ಇದ್ದ ದಾಖಲೆಗಳನ್ನು ಬದಲಾವಣೆ ಮಾಡಿಸಿಲ್ಲ. 2011 ರಲ್ಲಿ ನಮ್ಮ ಆಸ್ತಿ ಮೇಲೆ ಬ್ಯಾಂಕಿನಿಂದ ಸಾಲ ಪಡೆದಿದ್ದೇನೆ. ಸಾಲ ಈಗಲೂ ಬಾಕಿ ಇದೆ.

24. ಒಡೆಯರಹಳ್ಳಿ ಗ್ರಾಮದ ಸರ್ವೆ ನಂಬರ್ 4 ರಲ್ಲಿ 1997 ಕ್ಕೂ ಮೊದಲು 3 ಎಕರೆ 3 ಗುಂಟೆ ಜಮೀನು ಇತ್ತು. ಸದರಿ ಜಮೀನು ನನ್ನ ದೊಡ್ಡಪ್ಪ ನಂಧ್ಯಪ್ಪನ ಹೆಸರಿಗೆ ಇತ್ತು. ಸದರಿ ಸ್ವತ್ತುಗಳು ನಂಧ್ಯಪ್ಪ ಅಥವಾ ಅವರ ತಂದೆ ಬಸಪ್ಪನಿಗೆ ಹೇಗೆ ಬಂತು ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 4 ರಲ್ಲಿ 1997 ರಲ್ಲಿ ಎಷ್ಟು ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

25. ದಾವಾ ಐಟಂ ನಂಬರ್ 3 ರ ಮನೆ 43x108 ಅಡಿ ವಿಸ್ತೀರ್ಣ ಇದೆ. ಸದರಿ ಸ್ವತ್ತಿನ ಖಾತೆ ಈಗ ನನ್ನ ದೊಡ್ಡಪ್ಪ ನಂಧ್ಯಪ್ಪ ಬಿನ್ ಬಸಪ್ಪ ರವರ ಹೆಸರಿಗೆ ಇದೆ. ಸದರಿ ದಾಖಲೆಯನ್ನು ನಿ.ಪಿ.-5 ರಂತೆ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿ ದಾಖಲೆ 1966-67 ನೇ ಇಸವಿಯದ್ದು ಎಂದರೆ ಸರಿ. ದಾವಾ ಐಟಂ ನಂಬರ್ 3 ರ ಸ್ವತ್ತಿಗೆ ಸಂಬಂಧಪಟ್ಟ ಹಾಲಿ

ಪಂಚಾಯತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಐಟಂ ನಂಬರ್ 3 ರ ಸ್ವತ್ತು 1 ನೇ ಪ್ರತಿವಾದಿಯ ಅಜ್ಜ ನಂಧ್ಯಪ್ಪ ಬಿನ್ ಬಸಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಂಧ್ಯಪ್ಪ ಬಿನ್ ಬಸಪ್ಪನ ಸ್ವಯಾರ್ಜಿತ ಆಸ್ತಿಯಾದ ಕಾರಣ ಅದನ್ನು ನಿಡಿ-1 ರ ಪಾಲು ವಿಭಾಗದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ನಂಧ್ಯಪ್ಪ ಬಿನ್ ಬಸಪ್ಪನಿಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ಬಸಪ್ಪ ನನ್ನ ಅಜ್ಜನಾಗಿದ್ದು, ದಾವಾ ಐಟಂ ನಂಬರ್ 3 ಮೂಲತಃ ನನ್ನ ಅಜ್ಜನಿಗೆ ಸೇರಿತ್ತು ಮತ್ತು ಅವರಿಂದ ನಂಧ್ಯಪ್ಪ ಮತ್ತು ನನ್ನ ತಂದೆ ಬಸಪ್ಪ ಬಿನ್ ಬಸಪ್ಪನಿಗೆ ಬಂತು ಎನ್ನುತ್ತಾರೆ. ಸದರಿ ಸ್ವತ್ತಿನ ಖಾತೆ ನನ್ನ ತಂದೆ ಬಸಪ್ಪನ ಹೆಸರಿಗೆ ಆಗಿಲ್ಲ. ಸಾಕ್ಷಿ ಪುನಃ ನನ್ನ ತಂದೆ ಮತ್ತು ನಂಧ್ಯಪ್ಪ ಒಟ್ಟಿಗೆ ಅದೇ ಮನೆಯಲ್ಲಿದ್ದರು ಎನ್ನುತ್ತಾರೆ. ನನ್ನ ಅಜ್ಜನಿಗೆ ಹೆಸರಿಗೆ ಸದರಿ ಮನೆ ಇದ್ದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

**ಈ ಹಂತರದಲ್ಲಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಸಾಕ್ಷಿಗೆ ರೂ.300/- ಖರ್ಚು ಕೊಡುವಂತೆ ಆದೇಶಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**